ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 21/9/20

## 40ಕ್ಕೂ ಅಧಿಕ ವಿಧೇಯಕ, 19ಕ್ಕೂ ಹೆಚ್ಚು ಸುಗ್ರೀವಾಜ್ಞೆ, ಚರ್ಚೆ ಸಾಧ್ಯತೆ ಕಡಿಮೆ

# ಅನೇಕ ಪ್ರಥಮಗಳ ಆತಂಕಾಧಿವೇಶನ

**ಶಿವಕುಮಾರ್ ಬೆಳ್ಳಿತಟ್ಟೆ** ಬೆಂಗಳೂರು

ರಾಜ್ಯ ವಿಧಾನಮಂಡಲ ಈ ಬಾರಿಯ ಚಳಿಗಾಲದ ಅಧಿವೇಶನ ಅತ್ಯಂತ ಭಿನ್ನ ಹಾಗೂ ಅನೇಕ ಪ್ರಥಮಗಳಿಗೆ ಸಾಕ್ಷಿಯಾಗಲಿದೆ.

ಅದರಲ್ಲೂ ಮಸೂದೆಗಳ ಚರ್ಚೆಗೆ ಅವಕಾಶವೇ ಸಿಗದೆ ಅಂಗೀಕಾರವಾಗುವ ಆತಂಕವೂ ಎದುರಾಗಿದೆ.

ಏಕೆಂದರೆ, ಈ ಬಾರಿ ಅಧಿವೇಶನದಲ್ಲಿ ಸುಮಾರು 40ಕ್ಕೂ ಹೆಚ್ಚಿನ ವಿಧೇಯಕಗಳ ಮಂಡನೆಯಾಗಲಿದ್ದು, ಇದು ರಾಜ್ಯ ವಿಧಾನಮಂಡಲ ಇತಿಹಾಸದಲ್ಲೇ ಪ್ರಥಮವಾಗಲಿದೆ. ಹಾಗೆಯೇ ಸುಮಾರು 19ಕ್ಕೂ ಹೆಚ್ಚಿನ ಸುಗ್ರೀವಾಜ್ಞೆಗಳ ಮಸೂದೆಗಳು ಚರ್ಚೆಗೆ ಬರಲಿ ದ್ದು, ಇದು ಕೂಡ ಐತಿಹಾಸಿಕ ಪ್ರಥಮ ಎನಿಸಲಿದೆ.

ಈ ಮಧ್ಯೆ ಭೀಕರ ಕರೋನಾ ಕಾಟದಿಂದಾಗಿ ಅಧಿವೇಶನ ಮೂರ್ನಾಲ್ಕು ದಿನಕ್ಕೆ ಮೊಟಕಾಗುವ ಸಾಧ್ಯತೆ ಕಾಣುತ್ತಿದ್ದು, ಅತ್ಯಂತ ಕಡಿಮೆ ಅವಧಿಯಲ್ಲಿ ಹೆಚ್ಚು ಮಸೂದೆಗಳು ಮಂಡನೆಯಾದ ಅಧಿವೇಶನ ಎಂಬ ಪ್ರಥಮವೂ ದಾಖಲಾಗುವ ಸಾಧ್ಯತೆ ಇದೆ.

ಆದರೆ ಚರ್ಚೆಯಾಗದೆ ಮಸೂದೆಗಳು ಅಂಗೀಕಾರವಾಗಬಾರದು ಎಂದು ಹೇಳುವ ಸ್ಪೀಕರ್ ವಿಶ್ವೇಶ್ವರ ಹೆಗ್ಡೆ ಕಾಗೇರಿ ಅವರಿಗೆ, ಈ ಅಧಿವೇಶನದಲ್ಲಿ ಮಸೂದೆಗಳೇ ದೊಡ್ಡ ಸವಾಲು ತಂದೊಡ್ಡುವ ಸಂಭವ ಕಾಣುತ್ತಿದೆ.

**ಏನಿದು ಮಸೂದೆಗಳ ತೊಂದರೆ ? :** ಹಿಂದಿನ ಅಧಿವೇಶನಗಳಲ್ಲಿ 20 ಮಸೂದೆ ಮಂಡಿಸಿದರೆ ಹೆಚ್ಚು ಎನ್ನುವಂತಾಗಿತ್ತು. ಇನ್ನು ಸುಗ್ರೀವಾಜ್ಞೆಗಳ ಮಸೂದೆ ಅಪರೂಪ. ಆದರೆ ಈ ಬಾರಿ ಅಧಿವೇಶನದಲ್ಲಿ ಒಟ್ಟಾರೆ 40ಕ್ಕೂ ಮಸೂದೆಗಳು ಬರಲಿದ್ದು, 19ಕ್ಕೂ ಹೆಚ್ಚಿನ ಸುಗ್ರೀವಾಜ್ಞೆಗಳಿವೆ. ಆದರೆ ಕರೋನಾ ಪರಿಣಾಮ ಸಚಿವರೂ ಸೇರಿದಂತೆ 50 ಸದಸ್ಯರು ಗೈರು ಹಾಜರಾ ಗುವ ಸಾಧ್ಯತೆಯಿದ್ದು, ಅಧಿವೇಶ ನವನ್ನು ತುಂಡರಿ ಸುವ ಚಿಂತನೆ ಇದೆ. ಹಾಗೇನಾ ದರೂ ಆದರೆ ಮೂರು ದಿನಗಳಲ್ಲಿ 40ಕ್ಕೂ ಅಧಿಕ ಮಸೂದೆಗಳನ್ನು ಚರ್ಚಿಸಿ ಅಂಗೀಕರಿಸುವುದಕ್ಕೆ ಸಾಧ್ಯವಿಲ್ಲ. ಜತೆಗೆ ಕರೋನಾದಿಂದಾಗಿ ಸಚಿವರು, ಶಾಸಕರ ಹಾಜರಾತಿಯೂ ವಿರಳವಾಗಲಿದ್ದು,

**ಮಸೂದೆಗಳ ಮೇಲೆ ಚರ್ಚೆ ಸಾಧ್ಯತೆ ಕಡಿಮೆ**

ಹೀಗಾಗಿ ಮಸೂದೆಗಳನ್ನು ನಂತರದ ಅಧಿವೇಶನಕ್ಕೆ ಮುಂದೂಡಬಹುದು. ಇಲ್ಲವೇ ಚರ್ಚಿಸದೆ ಅಂಗೀಕರಿಸಬಹುದು. ಆದರೆ ಸುಗ್ರೀವಾಜ್ಞೆ ಮಸೂದೆ ಗಳನ್ನು ಮಾತ್ರ ಮುಂದಿನ ಅಧಿವೇಶನಕ್ಕೆ ಮುಂದೂಡಲಾಗದು. ಅವುಗಳನ್ನು ಅಂಗೀಕರಿಸಲೇಬೇಕು. ಇಲ್ಲವಾದರೆ ಅವು ರದ್ದಾಗುವ ಆತಂಕವಿದೆ.

## ಸುಗ್ರೀವಾಜ್ಞೆಗಳೇ ಸಮಸ್ಯೆ !

**ನಿಯಮದ ಪ್ರಕಾರ ಸರಕಾರ ಯಾವುದೇ ಸುಗ್ರೀವಾಜ್ಞೆ ಹೊರಡಿಸಿದರೂ 6 ತಿಂಗಳ ಒಳಗಾಗಿ ಅದರ ಮಸೂದೆ ಮಂಡಿಸಿ ಉಭಯ ಸದನಗಳಲ್ಲಿ ಅಂಗೀಕಾರ ಪಡೆಯಬೇಕು. ಇಲ್ಲವಾದರೆ ಸುಗ್ರೀವಾಜ್ಞೆ ರದ್ದಾಗಲಿದ್ದು, ಸರಕಾರ ಮತ್ತೆ ಸುಗ್ರೀವಾಜ್ಞೆ ಹೊರಡಿಸಬೇಕಾಗುತ್ತದೆ. ಇದರಿಂದ ಸರಕಾರಕ್ಕೆ ಮುಖಭಂಗವಾಗುತ್ತದೆ. ಆದರೆ ಸರಕಾರ ಕೋವಿಡ್ ಹಾಗೂ ಲಾಕ್ ಡೌನ್ ಸಂದರ್ಭದಲ್ಲಿ ಆರೋಗ್ಯ ಇಲಾಖೆ, ಕಾರ್ಮಿಕ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಕಂದಾಯ ಇಲಾಖೆಗಳಿಗೆ ಸಂಬಂಧಿಸಿದ ಅನೇಕ ಸುಗ್ರೀವಾಜ್ಞೆ ಹೊರಡಿಸಿದ್ದು, ಅವುಗಳಿಗೆ ಈಗ ಕಾಯ್ದೆ ರೂಪ ನೀಡಬೇಕಿದೆ. ಹೀಗಾಗಿ ಸದ್ಯ ಅಧಿವೇಶನದಲ್ಲಿ ಭೂ ಕಬಳಿಕೆ ನಿಷೇಧ, ಸಾಂಕ್ರಾಮಿಕ ರೋಗಗಳ ತಡೆ, ಪಟ್ಟಣ ಗ್ರಾಮಾಂತರ ಯೋಜನೆ, ಬಿಡಿಎ ಹಾಗೂ ವಿಶ್ವವಿದ್ಯಾಲಯಗಳ ಕಾನೂನು ತಿದ್ದುಪಡಿ, ಶಾಸಕರ ವೇತನ ಕಡಿತ, ಕಾರ್ಮಿಕ ಕಾಯ್ದೆ ತಿದ್ದುಪಡಿ, ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ, ಖಾಸಗಿ ವೈದ್ಯಕೀಯ ಸಂಸ್ಥೆಗಳ ತಿದ್ದುಪಡಿ, ಕರ್ನಾಟಕ ಭೂ ಸುಧಾರಣಾ ತಿದ್ದುಪಡಿ, ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ಯಗಳ ತಿದ್ದುಪಡಿ ವಿಧೇಯಕಗಳು ಅಧಿವೇಶನದಲ್ಲಿ ತುರ್ತಾಗಿ ಅಂಗೀಕಾರವಾಗಬೇಕಿದೆ. ಆದರೆ, ಅಧಿವೇಶನ ಅವಧಿ ಕಡಿಮೆ ಇರುವ ಕಾರಣ ಇಷ್ಟೂ ವಿಧೇಯಕಗಳ ಮೇಲೆ ಚರ್ಚೆ ಸಾಧ್ಯತೆ ಕಡಿಮೆ.**

## ರಾಜ್ಯಪಾಲರ ಏನ್ ಮಾಡ್ತಾರೋ ?

**ಒಂದೊಮ್ಮೆ ಈ ವಿಧೇಯಕಗಳ ಮೇಲೆ ಚರ್ಚೆ ನಡೆಯದೆ ಅಂಗೀಕರಿಸಿದರೆ ಇದಕ್ಕೆ ರಾಜ್ಯಪಾಲರು ಹೇಗೆ ಪ್ರತಿಕ್ರಿಯಿಸುತ್ತಾರೋ ಎನ್ನುವ ಆತಂಕವಿದೆ.**

**ಏಕೆಂದರೆ, ಅಧಿವೇಶನ ನಡೆಯದ ಕಾಲದಲ್ಲಿ ಯಾವುದೇ ಕಾಯ್ದೆ ಜಾರಿ ಮಾಡಬೇಕಾದರೆ ಅದನ್ನು ಸುಗ್ರೀವಾಜ್ಞೆ ಜಾರಿಗೊಳಿಸಬೇಕು. ಆಗ ಸರಕಾರದ ಪರವಾಗಿ ರಾಜ್ಯಪಾಲರು ಸುಗ್ರೀವಾಜ್ಞೆ ಹೊರಡಿಸುತ್ತಾರೆ. ಆದರೆ ಅವರೇ ಹೊರಡಿಸಿದ ಆದ್ಯಾದೇಶದ ವಿಧೇಯಕ ಬಗ್ಗೆ ಚರ್ಚೆಯೇ ಆಗದಿದ್ದರೆ ಅವರು ಏನು ಮಾಡವರೋ ಎನ್ನುವ ಆತಂಕವೂ ಸರಕಾರಕ್ಕೆ ಎದುರಾಗಿದೆ. ಏಕೆಂದರೆ ಈ ಹಿಂದೆ ರಾಜ್ಯಪಾಲರು ವಿಧೇಯಕಗಳನ್ನು ವಾಪಸ್ ಕಳುಹಿಸಿರುವ ಉದಾಹರಣೆಗಳಿವೆ.**

> **ವಿಧೇಯಕಗಳ ಮೇಲೆ ಚರ್ಚೆ ಆಗಬೇಕೆನ್ನುವುದು ನಮ್ಮ ಉದ್ದೇಶ. ಆದರೆ ಸಮಯ ಕಡಿಮೆ ಇದೆ. ಈ ಬಗ್ಗೆ ಕಲಾಪ ಸಲಹಾ ಸಮಿತಿಯಲ್ಲಿ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತೇವೆ.**
>
> -**ವಿಶ್ವೇಶ್ವರ ಹೆಗ್ಡೆ ಕಾಗೇರಿ** ವಿಧಾನಸಭೆ ಸ್ಪೀಕರ್